ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ

ಸಿಸಿ ನಂಬರ. 557/2023

ಸಿ ಡಬ್ಲ್ಯೂ-19

ಪಿ ಡಬ್ಲ್ಯೂ- 10

ದಿಃ 11-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಸಾಕ್ಷಿಯ ಹೆಸರುಃ ರವಿ ಬೀಸರಳ್ಳಿ

ತಂದೆಯ ಹೆಸರುಃ ಬೀಮಸೇನ್ ರಾವ್

ವಯಸ್ಸುಃ 56 ವರ್ಷ

ಉದ್ಯೋಗಃ ಹಿರಿಯ ಮೋಟರು ವಾಹನ ನಿರೀಕ್ಷಕರು, ಸಾರಿಗೆ ಕಚೇರಿ, ಕಾರವಾರ

ವಿಳಾಸಃ ಕಾರವಾರ

ಮುಖ್ಯ ವಿಚಾರಣೆ: ಮಾನ್ಯ ಎ ಪಿ ಪಿ ರವರಿಂದಃ

ನಾನು ಕಳೆದ 10 ವರ್ಷಗಳಿಂದ ಕಾರವರದಲ್ಲಿ ಹಿರಿಯ ಮೋಟರಾ ವಾಹನ ನಿರೀಕ್ಷಕರು, ಸಾರಿಗೆ ಕಚೇರಿಯಲ್ಲಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದೇನೆ.

2. ದಿಃ 15-04-2023 ರಂದು ಪಿಐ ಅಂಕೋಲಾ ಇವರಿಂದ ನಿವೇದನೆ ಬಂದಿದ್ದು, ಅದೇ ದಿನ ಸಂಜೆ 4.05 ಗಂಟೆಗೆ ಬಜಾಜ್ ಆಟೋ ರಿಕ್ಷಾ ನಂ. ಕೆ ಎ 30/ಎ 5087 ನೆದ್ದನ್ನು ಪರಿವೀಕ್ಷಣೆ ಮಾಡಿದಾಗ ಸದರಿ ವಾಹನಕ್ಕೆ ಯಾವುದೇ ಹಾನಿಯಾಗಿರುವುದು ಕಂಡುಬಂದಿರುವುದಿಲ್ಲ. ಯಾವುದೇ ತಾಂತ್ರಿಕ ತೊಂದರೆಯಿಂದ ಅಪಘಾತವಾಗಿರುವುದಿಲ್ಲ, ಒಂದು ಕಡೆ ಹಾನಿಯಾಗಿದ್ದು, ಅದರಂತೆ front shape

dented towards right side. ಇದಕ್ಕೆ ಸಂಬಂಧಪಟ್ಟು ನಾನು ವರದಿಯನ್ನು ನೀಡಿದ್ದು, ಸಾಕ್ಷಿಯು ವರದಿ ಮೇಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು, ವರದಿಯನ್ನು ನಿಪಿ-24 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-24ಎ ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ವಿ.ವಿ.ಎಸ್ ಇವರಿಂದಃ

3. ನಿಪಿ-24 ರ 3ನೇ ಪಾಯಿಂಟ್ ನಲ್ಲಿ ನಮೂದು ಆಗಿರುವುದು ಆನ್ ಲೈನ್ ಜನರೇಟೆಡ್ ಎಂದರೆ ಸರಿ. ಸದರಿ ದಾಖಲೆಯನ್ನೂ ಸಹ ಆನ್ ಲೈನಿನಲ್ಲೇ ತೆಗೆಯಲಾಗಿದೆ ಎಂದರೆ ಸರಿ. ಆನ್ ಲೈನ್ ಜನರೇಟೇಡ್ ಪ್ರತಿಯನ್ನು ಎಲ್ಲಿ ಜನರೇಟ್ ಮಾಡಿರುತ್ತೀರಿ ಎಂದರೆ ಸಾಕ್ಷಿಯು ಕಚೇರಿಯಲ್ಲಿ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಯಾವ ಕಚೇರಿ ಎಂದರೆ ಸಾಕ್ಷಿಯು ಆರ್ ಟಿ ಓ ಕಾರವಾರ ಎಂದು ಗುರುತಿಸಲಾಯಿತು. ಅಂಕೋಲಾದಿಂದ ಕಾರವಾರ ಎಷ್ಟು ದೂರ ಇರುತ್ತದೆ ಎಂದರೆ ಸಾಕ್ಷಿಯು 35 ಕಿ.ಮೀ ಎಂದು ಗುರುತಿಸಲಾಯಿತು. ಆನ್ ಲೈನ್ ಜನರೇಟ್ ಆಗಿರುವುದರಿಂದ ಯಾವ ದಿನಾಂಕ ಹಾಗೂ ಯಾವ ಸಮಯದಲ್ಲಿ ಜನರೇಟ್ ಆಗಿರುತ್ತದೆ ಎಂದು ನಮೂದು ಇರುತ್ತದೆ ಎಂದರೆ ಸರಿ. ಜನರೇಟ್ ಆದ ದಿನಾಂಕ ಹಾಗೂ ಸಮಯದ ನಂತರವೇ ಪ್ರಿಂಟ್ ತೆಗೆಯಲು ಬರುತ್ತದೆ ಹೊರತಾಗಿ ಅದರ ಮೊದಲು ತೆಗೆಯಲು ಬರುವುದಿಲ್ಲ ಎಂದರೆ ಸರಿ. ಅಂಕೋಲಾ ಪಿಐ ಇವರು ಕೊಟ್ಟರು ಎಂದ ನಿವೇದನೆಯ ಪ್ರತಿ ನಿಮ್ಮ ಹತ್ತಿರ ಇದೆಯಾ ಎಂದರೆ ಇಲ್ಲ, ಕಚೇರಿಯಲ್ಲಿ ಇರುತ್ತದೆ, ತಂದಿರುವುದಿಲ್ಲ ಎಂದು ನುಡಿಯುತ್ತಾರೆ. ನಿವೇದಿನೆಯಲ್ಲಿ ಏನು ನಮೂದು ಮಾಡಿರುತ್ತಾರೆ ಎಂದು ಹೇಳಲು

ಆಗುತ್ತಾ ಎಂದರೆ ಸಾಕ್ಷಿಯು ಮೇಲೆ ಹೇಳಿದ ವಾಹನವನ್ನು ಬಂದು ಪರೀಕ್ಷಿಸಲು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ನಿಮ್ಮ ಕಚೇರಿಯ ಅವಧಿ ಎಷ್ಟು ಎಂದರೆ ಸಾಕ್ಷಿಯು ಬೆಳಿಗ್ಗೆ 10.30 ರಿಂದ ಸಂಜೆ 5.30 ಗಂಟೆಯವರೆಗೆ ಎಂದು ನುಡಿಯುತ್ತಾರೆ. 5.30 ಗಂಟೆಯಾದ ನಂತರ ಕಚೇರಿಯಲ್ಲಿ ಇರುತ್ತೀರಾ ಎಂದರೆ ಸಾಕ್ಷಿಯು ಕೆಲಸ ಇದ್ದರೆ 6-7 ಗಂಟೆಯತನಕ ಇರುತ್ತೇವೆ ಎಂದು ನುಡಿಯುತ್ತಾರೆ. ರಾತ್ರಿ 9 ಗಂಟೆಯ ನಂತರ ಯಾವಾಗಾದರೂ ಕಚೇರಿಯಲ್ಲಿ ಇದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನೀವು ಹೇಳಿದ ನಿವೇದನೆಯನ್ನು ಪೊಲೀಸರು ಬೈ ಹ್ಯಾಂಡ್ ತಂದುಕೊಟ್ಟಿರುತ್ತಾರಾ ಎಂದರೆ ಹೌದು ಎಂದು ನುಡಿಯುತ್ತಾರೆ. ಕಚೇರಿಗೆ ಬಂದು ತಂದು ಕೊಟ್ಟಿರುತ್ತಾರಾ ಎಂದರೆ ಹೌದು ಎಂದು ನುಡಿಯುತ್ತಾರೆ. ನಿಪಿ-24 ನಮೂದು ಮಾಡುವ ಸಂದರ್ಭದಲ್ಲಿ ಯಾವ ದಾಖಲಾತಿಗಳನ್ನು ಪರಿಶೀಲನೆ ಮಾಡಿರುತ್ತೀರಾ ಎಂದರೆ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-24 ರಲ್ಲಿ ಆಕ್ಸಿಡೆಂಟ್ ಐಡಿ ಸಂಖ್ಯೆ ಅದು ಸಹ ಆನ್ ಲೈನ್ ಜನರೇಟೇಡ್ ಎಂದರೆ ಸರಿ. ನಿಪಿ-10 ಪೋಟೋದಲ್ಲಿ ನೀವು ಹೇಳಿದ ಪ್ರಕಾರ ಡೆಂಟ್ ಆಗಿರುವ ಹಾಗೆ ಕಾಣುವುದಿಲ್ಲ ಎಂದರೆ ಸಾಕ್ಷಿಯು ಕಾಣುತ್ತದೆ ಎಂದು ನುಡಿಯುತ್ತಾರೆ. ಹೆಡ್ ಲೈಟಿನ ಕೆಳಗಡೆ ಸೈಡಿನಲ್ಲಿ ಕಾಣುತ್ತದೆ ಎಂದು ನುಡಿಯುತ್ತಾರೆ. ಹೆಡ್ ಲೈಟಿನ ಕೆಳಗಡೆ ಸೈಡಿನಲ್ಲಿ ಯಾವುದೇ ಒಬ್ಬ ವ್ಯಕ್ತಿ ತಾಗಿದರೆ ವ್ಯಕ್ತಿಯ ಯಾವ ಭಾಗಕ್ಕೆ ಪಟ್ಟಾಗುತ್ತದೆ ಎಂದರೆ ಸಾಕ್ಷಿಯು ನನಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಕಾಲಿಗೆ ಆಗಬಹುದು ಎಂದು ನುಡಿಯುತ್ತಾರೆ. ನೀವು ಹೇಳಿದ ಡೆಂಟ್ ನೆಲದಿಂದ ಎಷ್ಟು ಅಡಿ ಎತ್ತರ ಇರಬಹುದು ಎಂದರೆ ಸಾಕ್ಷಿಯು ಸುಮಾರು 4-5 ಅಡಿ ಇರಬಹುದು ಎಂದು ನುಡಿಯುತ್ತಾರೆ.

ರಿಕ್ಷಾದ ಎತ್ತರ ಎಷ್ಟು ಇರಬಹುದು ಎಂದರೆ ಸಾಕ್ಷಿಯು 9-10 ಅಡಿ ಎತ್ತರ ಇರಬಹುದು ಎಂದು ನುಡಿಯುತ್ತಾರೆ. ಅಗಲ ಎಷ್ಟು ಇರಬಹುದು ಎಂದರೆ ಸಾಕ್ಷಿಯು 4 ಅಡಿ ಎಂದು ನುಡಿಯುತ್ತಾರೆ. ಉದ್ದ ಎಷ್ಟು ಇರುತ್ತದೆ ಎಂದರೆ ಸಾಕ್ಷಿಯು 6 ಅಡಿ ಇರುತ್ತದೆ ಎಂದು ನುಡಿಯುತ್ತಾರೆ. ನಿಪಿ-24 ರಲ್ಲಿ ಸದರಿ ವಾಹನದ ಅಳತೆಯನ್ನು ನಮೂದು ಮಾಡಿರುವುದಿಲ್ಲ ಎಂದರೆ ಸರಿ. ನೀವು ಯಾವ ಪದವಿಯನ್ನು ಹೊಂದಿರುತ್ತೀರಿ ಎಂದರೆ ಸಾಕ್ಷಿಯು ಬಿ.ಇ ಮೆಕ್ಯಾನಿಕ್, ಆಟೋಮೊಬೈಲ್ ಇಂಜಿನಿಯರಿಂಗ್ ಎಂದು ನುಡಿಯುತ್ತಾರೆ. ಬಲಬದಿ ಎಂದರೆ ಯಾವುದು ಎಂದರೆ ಸಾಕ್ಷಿಯು ಹೆಡ್ ಲೈಟಿನ ಕೆಳಗಡೆ ಇರುವ ಭಾಗ ಎಂದು ತೋರಿಸಿದ್ದು,ಸದರಿ ಭಾಗವನ್ನು ನ್ಯಾಯಾಲಯದ ಗುರುತಿಗಾಗಿ ನಿಪಿ-10ಎ ಎಂದು ಗುರುತಿಸಲಾಯಿತು. ತಾಂತ್ರಿಕ ಕೊರತೆ ಇಲ್ಲ ಎಂದು ನಮೂದಿಸಲು ಏನನ್ನೂ ಪರಿಶೀಲನೆ ಮಾಡಿರುತ್ತೀರಿ ಎಂದರೆ ಸಾಕ್ಷಿಯು ವಾಹನವನ್ನು ಪರಿಶೀಲನೆ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಶೇಪ್ ಎನ್ನುವುದು ವಾಹನದ ದೊಡ್ಡ ಭಾಗ ಎಂದರೆ ಸರಿ. ನಿಪಿ-24 ರಲ್ಲಿ ನಿಖರವಾಗಿ ಎಲ್ಲಿ ಹಾನಿಯಾಗಿರುತ್ತದೆ ಎಂದು ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಸಾಮಾನ್ಯವಾಗಿ ಒಬ್ಬ ವ್ಯಕ್ತಿ ವಾಹನಕ್ಕೆ ಡಿಕ್ಕಿ ಹೊಡೆದರೆ ವಾಹನಕ್ಕೆ ದೊಡ್ಡದಾಗಿ ಹಾನಿಯಾಗುತ್ತದೆ ಎಂದರೆ ಸಾಕ್ಷಿಯು ಸಣ್ಣದಾಗಿ ತಾಗಿದರೆ ಸಣ್ಣ ಹಾನಿ ಆಗುತ್ತದೆ ಹಾಗೂ ಅದೇ ರೀತಿ ದೊಡ್ಡದಾಗಿ ತಾಗಿದರೆ ದೊಡ್ಡ ಹಾನಿ ಆಗುತ್ತದೆ ಎಂದು ನುಡಿಯುತ್ತಾರೆ. ನೀವು ಎಲ್ಲಿಯಾದರೂ ಕಚೇರಿಂದ ಹೊರಗಡೆ ಹೋಗಬೇಕಾದರೆ ಮುಮೆಂಟ್ ರಜಿಸ್ಟರಿನಲ್ಲಿ ನಮೂದು ಮಾಡಬೇಕಾಗುತ್ತದೆ ಎಂದರೆ ಸರಿಯಲ್ಲ. ನಿಪಿ-24 ರಂತೆ ವರದಿಯನ್ನು ಕೊಡಲು ಏನಾದರೂ ಸ್ಪೆಶಲೈಜೇಶನ್ ಮಾಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನೀವು ಅಂಕೋಲಾ ಠಾಣೆಗೆ

ಬಂದಿದ್ದಾಗಲಿ, ವಾಹನವನ್ನು ಪರಿಶೀಲನೆ ಮಾಡಿದ್ದಾಗಲಿ ಅಥವಾ ನಿಪಿ–24 ರಂತೆ ವರದಿಯನ್ನು ಕೊಟ್ಟಿದ್ದಾಗಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಅಂಕೋಲಾ ಠಾಣೆಗೆ ಪರಿಶೀಲನೆಗೆ ಬಂದಿರುತ್ತೀರಿ ಎನ್ನುವ ಸಮಯದಲ್ಲಿ ಏನಾದರೂ ನೋಟ್ ಮಾಡಿಕೊಂಡು ಹೋಗಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನೀವೇನೂ ಘಟನಾ ಸ್ಥಳಕ್ಕೆ ಹೋಗಿದ್ದು ಇರುವುದಿಲ್ಲ ಎಂದರೆ ಸರಿ. ಡೆಂಟ್ ಆಗಿರುತ್ತದೆ ಎಂದುಸುಳ್ಳು ಹೇಳುತ್ತಿದ್ದು, ಪೊಲೀಸರು ಕೊಟ್ಟ ಒಂದು ಸುಳ್ಳು ನಿವೇದನೆಗೆ ಸುಳ್ಳು ಪ್ರಮಾಣ ಪತ್ರವನ್ನು ಕೊಟ್ಟು, ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

ಜೆ.ಎಂ.ಎಫ್.ಸಿ., ಅಂಕೋಲಾ.